ಕರ್ನಾಟಕ ಸರ್ಕಾರ
**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ**
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
Government of Karnataka
**Karnataka Residential Educational Institutions Society**
(An Organisation of Govt. of Karnataka)

ಕವಶಿಸಸ/ಆಡಳಿತ/ನೇ.ನೇ/ಹೆಆ ಪ/ಸಿ.ಆರ್ /2023-24 ದಿನಾಂಕ: 28.12.2023

ತಿಳುವಳಿಕೆ ಪತ್ರ

ವಿಷಯ: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ಹೆಚ್ಚುವರಿ ಆಯೆಪಟ್ಟಿಯಲ್ಲಿಆಯ್ಕೆಯಾದ ಕನ್ನಡ, ಆಂಗ್ಲ ಭಾಷೆ, ವಿಜ್ಞಾನ, ಗಣಿತ, ಗಣಕಯಂತ್ರ,, ಧೈಹಿಕ ಶಿಕ್ಷಣ ಶಿಕ್ಷಕರ ಹಾಗೂ ಪ್ರ.ದ.ಸ, ನಿಲಯಪಾಲಕರು ಹಾಗೂ ಶುಶ್ರೂಷಕರ ಹಾಗೂ ಕೃಪಾಂಕದ ಮೂಲಕ ಆಯ್ಕೆಯಾದ ಅಭ್ಯರ್ಥಿಗಳಿಗೆ ಮರು ಕೌನ್ಸಿಲಿಂಗ್ ಮಾಡುವ ಬಗ್ಗೆ.

ಉಲ್ಲೇಖ:
1. ಆಯೋಗದ ಅಧಿಸೂಚನೆ ಸಂಖ್ಯೆ: ಆರ್(2) 1084/2017-18/ಪಿಎಸ್ ಸಿ ದಿ:23-06-17
2. ಹೆಚ್ಚುವರಿ ಆಯ್ಕೆ ಪಟ್ಟಿ ದಿನಾಂಕ 17.08.2023
3. ಈ ಕಛೇರಿ ಪತ್ರ ದಿನಾಂಕ : 23.11.202
4. ಈ ಕಛೇರಿ ಪತ್ರ ದಿನಾಂಕ 28.12.2023.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆಗಳಿಗೆ ಕರ್ನಾಟಕ ಲೋಕ ಸೇವಾ ಆಯೋಗದ ಮುಖಾಂತರ ಆಯ್ಕೆಯಾದ ಕನ್ನಡ, ಆಂಗ್ಲ ಭಾಷೆ, ವಿಜ್ಞಾನ, ಗಣಿತ, ಗಣಕಯಂತ್ರ, ಧೈಹಿಕ ಶಿಕ್ಷಣ ಶಿಕ್ಷಕರ ಹಾಗೂ ಪ್ರ.ದ.ಸ, ನಿಲಯಪಾಲಕರು ಹಾಗೂ ಶುಶ್ರೂಷಕರ ಹುದ್ದೆಗಳ ಅಭ್ಯರ್ಥಿಗಳ ಹೆಚ್ಚುವರಿ ಆಯ್ಕೆಪಟ್ಟಿಯನ್ನು ಪ್ರಕಟಿಸಿದೆ. ಸದರಿ ಹೆಚ್ಚುವರಿ ಆಯ್ಕೆಪಟ್ಟಿಯಲ್ಲಿನ ಅಭ್ಯರ್ಥಿಗಳು ದಾಖಲಾತಿ ಪರಿಶೀಲನೆಗೆ ಹಾಜರಿದ್ದ 311 ಅಭ್ಯರ್ಥಿಗಳಿಗೆ ಉಲ್ಲೇಖ(3) ರ ಈ ಕಛೇರಿ ಪತ್ರದನ್ವಯ ದಿನಾಂಕ 29.11.2023 ಮತ್ತು ದಿನಾಂಕ 01.12.2023 ರಂದು ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿತ್ತು. ಅದರಂತೆ ಅಭ್ಯರ್ಥಿಗಳು ವಸತಿ ಶಾಲೆಗಳನ್ನು ಆಯ್ಕೆ ಮಾಡಿಕೊಂಡಿರುತ್ತೀರಿ.

ದಿನಾಂಕ 16.12.2023 ರಂದು ಮೊರಾರ್ಜಿ ದೇಸಾಯಿ ವಸತಿ ಶಾಲೆ, ಯಲವಳ್ಳಿ, ಮಾಲೂರು ತಾಲ್ಲೂಕು ಕೋಲಾರ ಜಿಲ್ಲೆಯ ವಸತಿ ಶಾಲೆಯಲ್ಲಿ ನಡೆದ ಘಟನೆಯ ಕುರಿತಂತೆ ಸುದ್ದಿ ವಾಹಿನಿಗಳಲ್ಲಿ ಪ್ರಸಾರವಾದ ನಂತರ ಮಾನ್ಯ ಸಚಿವರು, ಸಮಾಜ ಕಲ್ಯಾಣ ಇಲಾಖೆ ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ನಿರ್ದೇಶನದಂತೆ ದಿನಾಂಕ 29.11.2023 ಮತ್ತು ದಿನಾಂಕ 01.12.2023 ರಂದು ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ರದ್ದುಪಡಿಸಿ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಹಾಗೂ ಇತರೆ ಜಿಲ್ಲೆಗಳಲ್ಲಿ ಹೆಚ್ಚು ಹುದ್ದೆಗಳು ಖಾಲಿ ಇರುವ ಹುದ್ದೆಗಳಿಗೆ ಮಾತ್ರ ಪರಿಗಣಿಸಿ ಹೆಚ್ಚುವರಿ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾಗಿರುವ ಮತ್ತು ಕೃಪಾಂಕದ ಮೂಲಕ ಆಯ್ಕೆಯಾಗಿರುವ ಅಭ್ಯರ್ಥಿಗಳನ್ನು ಸ್ಥಳನಿಯುಕ್ತಿಗೊಳಿಸಲು ಸೂಚಿಸಲಾಗಿತ್ತು. ಈ ಸಂಬಂಧ ಕಡತದಲ್ಲಿ ಸರ್ಕಾರವನ್ನು ಅನುಮೋದನೆ ಕೋರಲಾಗಿತ್ತು. ಸರ್ಕಾರದ ಅನುಮೋದನೆಯಂತೆ ದಿನಾಂಕ 29.11.2023 ಮತ್ತು ದಿನಾಂಕ 01.12.2023 ರಂದು ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ರದ್ದುಪಡಿಸಿ ದಿನಾಂಕ 29.12.2023 ರಂದು ಮರು ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ಡಾ|| ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ಅಭಿವೃಧ್ಧಿ ನಿಗಮ ನಿಯಮಿತ, ಲಿಡಕರ್ ಭವನ, ವಸಂತನಗರ ಇಲ್ಲಿ ಆಯೋಜಿಸಲಾಗಿತ್ತು. ಆಡಳಿತಾತ್ಮಕ ಕಾರಣಗಳಿಂದ ದಿನಾಂಕ 29.12.2023 ರಂದು ಮರು ಕೌನ್ಸಿಲಿಂಗ್ ಪ್ರಕ್ರಿಯೆಯನ್ನು **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಯುವನಿಕ, ರಾಜ್ಯ ಯುವ ಕೇಂದ್ರ ನೃಪತುಂಗ ರಸ್ತೆ, ಬೆಂಗಳೂರು** ಇಲ್ಲಿಗೆ ಸ್ಥಳ ಬದಲಾವಣೆ ಮಾಡಿ ನಿಗಧಿಪಡಿಸಲಾಗಿದೆ.

ನಂ. 8, ಎಂ.ಎಸ್.ಬಿ–1,6 & 7ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು – 560052. ದೂರವಾಣಿ : 080-22283366, 22265755, 22204466, 22207722, ಟೆಲಿಫ್ಯಾಕ್ಸ್ : 080-22262288
# 8, M.S.B-1, 6th & 7th Floor, Cunningham Road, Bengaluru - 560052. Phone : 080-22283366, 22265755, 22204466, 22207722, Telefax : 080-22262288
E-mail : edkreis@rediff.com, Website : www.kreis.kar.nic.in

ಆದ್ದರಿಂದ ಹೆಚ್ಚುವರಿ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾಗಿರುವ ಎಲ್ಲಾ ಅಭ್ಯರ್ಥಿಗಳು ಹಾಗೂ ಕೃಪಾಂಕದ ಮೂಲಕ ಆಯ್ಕೆಯಾಗಿರುವ 12 ಅಭ್ಯರ್ಥಿಗಳನ್ನು ಕೌನ್ಸಿಲಿಂಗ್ ಪ್ರಕ್ರಿಯೆಗೆ ಕಡ್ಡಾಯವಾಗಿ ಹಾಜರಾಗಲು ಸೂಚಿಸಿದೆ.

| ಕ್ರ ಸಂ | **ವಿಷಯ** | **ಸಮಯ** |
|---|---|---|
| 1 | ಎಫ್.ಡಿ.ಎ ಕಂ ಕಂಪ್ಯೂಟರ್ ಆಪರೇಟರ್ | ಬೆಳಿಗ್ಗೆ 10 ರಿಂದ 1.30 ರ ವರೆಗೆ |
| 2 | ನಿಲಯ ಪಾಲಕರು | |
| 3 | ಶುಶ್ರೂಷಕರು | |
| 4 | ಕೃಪಾಂಕದ ಮೂಲಕ ಆಯ್ಕೆಯಾದ ಅಭ್ಯರ್ಥಿಗಳು | |
| 5 | ಕನ್ನಡ ಭಾಷಾ ಶಿಕ್ಷಕರು | ಮದ್ಯಾಹ್ನ 2.00 ರಿಂದ ಸಂಜೆ 6.00 ಗಂಟೆಯ ವರೆಗೆ |
| 6 | ಇಂಗ್ಲೀಷ್ ಶಿಕ್ಷಕರು | |
| 7 | ವಿಜ್ಞಾನ ಶಿಕ್ಷಕರು | |
| 8 | ಗಣಿತ ಶಿಕ್ಷಕರು | |
| 9 | ಕಂಪ್ಯೂಟರ್ ಶಿಕ್ಷಕರು | |
| 10 | ದೈಹಿಕ ಶಿಕ್ಷಣ ಶಿಕ್ಷಕರು | |

ಕಾರ್ಯನಿರ್ವಾಹಕ ನಿರ್ದೇಶಕರು